ಮನೆ ವರೆಗೆ ಅಳವಡಿಸಬೇಕಾದ 10.34 ಕಿ.ಮೀ ಏರು ಕೊಳವೆ ಮಾರ್ಗಕ್ಕೆ ಗುತ್ತಿಗೆ ನೇಮಿಸಲಾಗಿದ್ದು, ಗುತ್ತಿಗೆದಾರರು 9.20ಕಿ.ಮೀ ಕೊಳವೆ ಸರಬರಾಜು ಮಾಡಲಾಗಿದ್ದು, 5.8 ಕಿ.ಮೀ ಕೊಳವೆ ಈಗಾಗಲೆ ಅಳವಡಿಸಿ ಕೆಲಸವನ್ನು ನಿಲ್ಲಿಸಿರುತ್ತಾರೆ. ಈ ಕೆಲಸವನ್ನು ಬೇರೆಗುತ್ತಿಗೆದಾರರಿಂದ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಬ್ಯಾಡಗಿ : ಸದರಿ ಯೋಜನೆಯಲ್ಲಿ ಈಗಾಗಲೇ ಮೇಲ್ಮಟ್ಟದ ಜಲಸಂಗ್ರಹಾಗಾರ ಹಾಗೂ ವಸತಿ ಗೃಹ ನಿರ್ಮಿಸಲಾಗಿದ್ದು, ರಾಣಿಬೆನ್ನೂರು ಜಲಶುದ್ಧೀಕರಣದಿಂದ ಬ್ಯಾಡಗಿ ಪಟ್ಟಣದವರೆಗೆ ಅಳವಡಿಸಬೇಕಾದ 17.80 ಕಿ.ಮೀ ಉದ್ದದ 300 ಕಿ.ಮೀ ವ್ಯಾಸದ ಬಿ. ಆರ್.ಪಿ. ಕೊಳವೆ ಮಾರ್ಗದ ಗುತ್ತಿಗೆಯನ್ನು 1 :2000ರಲ್ಲಿ ನೇಮಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಆ) ಈ ಯೋಜನೆ 3 :90ರಲ್ಲಿ ಮಂಜೂರಾಗಿದೆ.

ಇ) ಈ ಯೋಜನೆಯನ್ನು 2000-2001ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ

ನಿಪ್ಪಾಣಿ, ಸಂಕೇಶ್ವರ ,ಚಿಕ್ಕೋಡಿ ಬೆಳಗಾವಿ ನಗರಗಳಿಗೆ ಕುಡಿಯುವ ನೀರಿನ ಯೋಜನೆ

1088 (1281) ಶ್ರೀ ಪಾಟೀಲ ಕಾಕಾಸಾಹೇಬ ಪಾಂಡುರಂಗ (ನಿಪ್ಪಾಣಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಿಪ್ಪಾಣಿ, ಸಂಕೇಶ್ವರ, ಚಿಕ್ಕೋಡಿ, ಬೆಳಗಾವಿ ನಗರದ ಕುಡಿಯುವ ನೀರಿನ ಯೋಜನೆಯು ಯಾವ ವರ್ಷದಲ್ಲಿ ಮಂಜೂರಾಗಿರುತ್ತವೆ?

2. ಕುಡಿಯುವ ನೀರಿನ ಯೋಜನೆಗಳಿಗೆ ಪ್ರತ್ಯೇಕವಾಗಿ ಹಣ ಖರ್ಚು ಮಾಡಿದ ವಿವರ ನೀಡುವುದು?

3. ನಿಪ್ಪಾಣಿ ನಗರಕ್ಕೆ ಕುಡಿಯುವ ನೀರಿನ ಯೋಜನೆ ಪ್ರಾರಂಭಿಸಿ ಇಷ್ಟು ವರ್ಷವಾದರೂ ಅದನ್ನು ಪೂರ್ತಿಮಾಡದೆ ಇರುವುದಕ್ಕೆ ಕಾರಣವೇನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

1. ನಿಪ್ಪಾಣಿ	1990
ಸಂಕೇಶ್ವರ	1990
ಚಿಕ್ಕೋಡಿ	1991
ಬೆಳಗಾವಿ	1990

2. ನಿಪ್ಪಾಣಿ	ರೂ. 264.21 ಲಕ್ಷಗಳು
ಹುಕ್ಕೇರಿ - ಸಂಕೇಶ್ವರ	ರೂ. 1081.78 ಲಕ್ಷಗಳು
ಚಿಕ್ಕೋಡಿ	ರೂ. 575.45 ಲಕ್ಷಗಳು
ಬೆಳಗಾವಿ	ರೂ. 3995.97ಲಕ್ಷಗಳು

3. ನಿಪ್ಪಾಣಿ ನಗರದ ನೀರು ಸರಬರಾಜು ಯೋಜನೆಯನ್ನು 10:96ರಲ್ಲಿ ಚಾಲ್ತಿಗೊಳಿಸಲಾಗಿದೆ. ಅಲ್ಲದೇ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

1. ಜವಹಾರ್ ಜಲಸಂಗ್ರಹಾಗಾರ ಜಲಶುದ್ದೀಕರಣ ಘಟಕದಿಂದ ಶಿರಗುಪ್ಪ ಟ್ಯಾಂಕ್‌ವರೆಗೆ 450 ಮಿ.ಮೀ ವ್ಯಾಸದ ಪಿ.ಎಸ್.ಪಿ ಕೊಳವೆ ಮಾರ್ಗ ಅಳವಡಿಸಲಾಗಿದೆ.

2. ಸರಿ 95 HP ಪಂಪನ್ನು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು, ಅದಷ್ಟು ಬೇಗನೆ ಪೂರ್ಣಗೊಳಿಸಲಾಗುವುದು.

ರೇಷ್ಮೆ ಮಾರುಕಟ್ಟೆಗಳ ಬಗ್ಗೆ

1090 (1265) ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಒಟ್ಟು ಎಷ್ಟು ರೇಷ್ಮೆ ಮಾರುಕಟ್ಟೆಗಳಿವೆ?

ಆ. ಈ ಮಾರುಕಟ್ಟೆಯಲ್ಲಿ ಕಳೆದ ಮೂರು ವರ್ಷಗಳಿಂದ ನಡೆದಿರುವ ವಹಿವಾಟೆಷ್ಟು? (ಪ್ರತಿ ತಿಂಗಳ ಹಾಗೂ ಪ್ರತ್ಯೇಕ ಮಾರುಕಟ್ಟೆಯ ವಿವರ ನೀಡುವುದು)

ಇ. ಮಾರುಕಟ್ಟೆ ನಿರ್ಮಾಣ ಮತ್ತು ನಿರ್ವಹಣೆಗೆ ಆಗಿರುವ ಖರ್ಚು ಎಷ್ಟು?

ಈ. ಎಷ್ಟು ಮಾರುಕಟ್ಟೆಗಳು ನಿರುಪಯೋಗವಾಗಿವೆ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ರಾಜ್ಯದಲ್ಲಿ 63 ರೇಷ್ಮೆ ಗೂಡಿನ ಮಾರುಕಟ್ಟೆಗಳಿವೆ.

ಆ. ವಹಿವಾಟು ವಿವರಗಳನ್ನು ಅನುಬಂಧ- 1ರಲ್ಲಿ ಒದಗಿಸಲಾಗಿದೆ.

ಇ. ವಿವರಗಳನ್ನು ಅನುಬಂಧ- 2ರಲ್ಲಿ ಒದಗಿಸಲಾಗಿದೆ.

ಈ. ಈ ಕೆಳಕಂಡ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಹಿವಾಟು ನಡೆದಿರುವುದಿಲ್ಲ.

1. ದೇವನಹಳ್ಳಿ

2. ಗೌರಿಬಿದನೂರು

3. ಬಂಗಾರಪೇಟೆ

4. ಮಂಡ್ಯ

5. ಶ್ರೀರಂಗಪಟ್ಟಣ

ಈ ಸ್ಥಳಗಳಲ್ಲಿ ರೀಲಿಂಗ್ ಚಟುವಟಿಕೆಗಳು ಇಲ್ಲದಿರುವುದರಿಂದ ಮಾರುಕಟ್ಟೆಗಳು ಕಾರ್ಯ ನಿರ್ವಹಿಸುತ್ತಿಲ್ಲ.